**ಸಾಕ್ಷಿಯನ್ನು ದಿಃ 27.04.2026 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ನಾನು ಪಧವೀ ಓದಿ ಕಲಿತಿದ್ದೇನೆ. ರಿಯಲ್ ಎಸ್ಟೇಟ್ ವ್ಯಾಪಾರ ಮಾಡುತ್ತಿದ್ದೇನೆ. ನನ್ನ ಜನ್ಮ ದಿಃ 13.08.1985 ಇರುತ್ತದೆ. ಈ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಲು ತೊಂದರೆ ಇಲ್ಲ. ನನ್ನ ಕಚೇರಿ ಜೆ.ಪಿ. ನಗರದ ಬೊಬ್ಬಿಮರದ ಬಳಿ ಇದೆ. ಅಪಘಾತದ ನಂತರ ನಾನು ಜೆ.ಎಸ್.ಎಸ್ ಆಸ್ಪತ್ರೆಗೆ ಹೋಗಿದ್ದೇನೆ. ಈಗ ನನಗೆ ತೋರಿಸುತ್ತಿರುವ ದಾಖಲೆ ನನಗೆ ಸಂಬಂಧಿಸಿದ ಜೆ.ಎಸ್.ಎಸ್ ಆಸ್ಪತ್ರೆಯ ಎಂ.ಎಲ್.ಸಿ. ಎಂದರೆ ಸರಿ. ಸಾಕ್ಷಿ ನೋಡಿ ಗುರುತಿಸಿದ ಎಂ.ಎಲ್.ಸಿ. ಎಕ್ಸಟ್ರಾಕ್ಟ್ ನ ಪ್ರತಿಯನ್ನು ಗುರುತಿಸುವಿಕೆಗಾಗಿ ನಿಆರ್. 1 ಎಂದು ಗುರುತಿಸಲಾಯಿತು. ನಿಆರ್. 1 ರಲ್ಲಿ ಗಾಯಾಳು ದ್ವಿಚಕ್ರ ವಾಹನ ಚಲಾಯಿಸುತ್ತಿದ್ದು ಕಾರು ಅಪಘಾತ ಪಡಿಸಿರುವುದಾಗಿ ನಮೂದಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಹಿಂಬದಿ ಸವಾರನಾಗಿದ್ದೆ ಎನ್ನುತ್ತಾರೆ. ನಿಪಿ. 6 ರಲ್ಲಿರುವ ಜೆ.ಎಸ್.ಎಸ್ ಆಸ್ಪತ್ರೆಯ ಗಾಯದ ಪ್ರಮಾಣ ಪತ್ರದಲ್ಲಿ ಗಾಯಾಳು ದ್ವಿಚಕ್ರ ವಾಹನ ಚಲಾಯಿಸುತ್ತಿದ್ದು ಕಾರು ಅಪಘಾತ ಪಡಿಸಿರುವುದಾಗಿ ನಮೂದಿದೆ ಎಂದರೆ ಸರಿ. ದೂರುದಾರರು ಈಗಲೂ ನನ್ನ ಬಳಿ ಕೆಲಸಕ್ಕೆ ಇದ್ದಾರೆ. ಅಪಘಾತದ ದಿನವೇ ದೂರನ್ನು ದೂರುದಾರರಾದ ಅಶೋಕ್ ರವರ ಮೂಲಕ ಕೊಡಿಸಲು ತೊಂದರೆ ಇತ್ತಾ ಎಂದರೆ ಅವರಿಗೂ ಪೆಟ್ಟಾಗಿತ್ತು ಎನ್ನುತ್ತಾರೆ. ಭಾನುಪ್ರಕಾಶ್ ನನ್ನ ಸ್ನೇಹಿತ. ಕಾರಿನವರಾದ ಚಂದ್ರ ಪರಿಚಿತರಲ್ಲ. ಅಶೋಕ್ ನನ್ನ ಜೊತೆ ಆಸ್ಪತ್ರೆಯಲ್ಲಿದ್ದರು. ಬೈಕ್ ಅನ್ನು ನಾನೇ ಚಲಾಯಿಸುತ್ತಿದ್ದು ಪರಿಹಾರ ಪಡೆಯಲು ತೊಂದರೆ ಆಗುತ್ತದೆ ಎಂದು ನಾನು ಹಿಂಬದಿ ಸವಾರನಾಗಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2018 ರಲ್ಲೇ ನಾನು ಸಹ ಚಾಲನ ಪರವಾನಗಿ ಪಡೆದಿದ್ದೇನೆ ಎನ್ನುತ್ತಾರೆ. ಕಾರಿನವರು ಮಾಲ್ ನ ಪಾರ್ಕಿಂಗ್ ಕಡೆಗೆ ಇಂಡಿಕೇಟರ್ ಹಾಕಿ ತಿರುಗಿಸಿಕೊಳ್ಳುತ್ತಿದ್ದಾಗ ನಾನೇ ದ್ವಿಚಕ್ರ ವಾಹನವನ್ನು ಅತಿವೇಗವಾಗಿ ಚಲಾಯಿಸಿಕೊಂಡು ಹೋಗಿ ಡಿಕ್ಕಿ ಪಡಿಸಿದ್ದೇನೆ ಎಂದರೆ ಸರಿಯಲ್ಲ. ದ್ವಿಚಕ್ರ ವಾಹನ ಅಶೋಕ್ ರವರಿಗೆ ಸೇರಿದ್ದು. ಅದಕ್ಕೆ ವಿಮೆ ಇದೆ. ಅಪಘಾತ ನನ್ನ ಅಜಾಗರೂಕತೆಯಿಂದ ಅಗಿದ್ದರೂ ಸಹ ವಿಮಾ ಪರಿಹಾರಕ್ಕಾಗಿ ದೊಡ್ಡ

ವಾಹನವಾದ ಕಾರಿನವರ ಮೇಲೆ ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಸ್ಥಳ ವಾಹನ ದಟ್ಟಣೆ ಇರುವ ಸ್ಥಳ ಎಂದರೆ ಸರಿ. ಆದ ಕಾರಣ ವಾಹನವನ್ನು ಅತಿವೇಗವಾಗಿ ಚಲಾಯಿಸಲಾಗುವುದಿಲ್ಲ ಎಂದರೆ ಸರಿಯಲ್ಲ.

2. ಜೆ.ಎಸ್.ಎಸ್ ಆಸ್ಪತ್ರೆಯಿಂದ ನಾಗರಾಜೇಗೌಡ ಮೆಮೋರಿಯಲ್ ಆಸ್ಪತ್ರೆಗೆ ಚಂದ್ರು ರವರೇ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ಒಳರೋಗಿಯಾಗಿದ್ದೆ. ನಾಗರಾಜ್ ಎಂಬ ವೈಧ್ಯರು ಚಿಕಿತ್ಸೆ ನೀಡಿದ್ದಾರೆ. ಬಿಡುಗಡೆಯಾದಾಗ ಫಿಜಿಯೋತೆರಫಿ ಮಾಡಲು ಸಲಹೆ ನೀಡಿದ್ದಾರೆ. ಫಿಜಿಯೋತೆರಫಿ ನಂತರ ಆರೋಗ್ಯವಾಗಿ ಓಡಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನಗಾದ ಗಾಯಗಳು ವಾಸಿಯಾಗಿದೆ. ಪ್ಲೇಟ್ ಮತ್ತು ಸ್ಕ್ರೂ ತೆಗೆದಿಲ್ಲ. ನಿಪಿ. 6 ರಲ್ಲಿ ವಾಹನ ಸಂಖ್ಯೆ ನಮೂದಾಗಿಲ್ಲ ಎಂದರೆ ಸರಿ. ನಾನೇ ಬೈಕ್ ಅನ್ನು ಚಲಾಯಿಸಿಕೊಂಡು ಹೋಗುತ್ತಿದ್ದು ನನ್ನ ತಪ್ಪಿನಿಂದ ಅಪಘಾತ ಆಗಿರುವ ಕಾರಣ ನಿಪಿ. 6 ರಲ್ಲಿ ಯಾವುದೇ ವಿವರ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ಬಿಲ್ ಸಂಖ್ಯೆ 4, 8, 10, 14, 15, 17 ಮತ್ತು ನಿಪಿ. 19 ರಲ್ಲಿ ಡೂಪ್ಲಿಕೇಟ್ ಎಂದು ಬರೆದಿದೆ ಎಂದರೆ ಸರಿ. ಮೂಲ ಪ್ರತಿ ಕಳೆದು ಹೋಗಿದೆ ಎನ್ನುತ್ತಾರೆ. ಒಳರೋಗಿ ಬಿಲ್ 20 ರಲ್ಲಿ ರಿಯಾಯಿತಿ ನೀಡಿದ್ದಾರೆ ಎಂದರೆ ಸರಿ. ಅಪಘಾತ ನನ್ನ ತಪ್ಪಿನಿಂದ ಆಗಿದ್ದರೂ ಪರಿಹಾರಕ್ಕೆ ಪೋಲೀಸರೊಂದಿಗೆ ಶಾಮಿಲಾಗಿ ಸುಳ್ಳು ಪ್ರಕರಣ ದಾಖಲಾಗುವಂತೆ ಮಾಡಿದ್ದೇನೆ ಎಂದರೆ ಸರಿಯಲ್ಲ.

(1 ಮತ್ತು 2 ನೇ ಎದುರುದಾರರು ಮೇಲ್ಕಂಡ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.